**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -768/2023**
**ಚಾಸಾ - 02 / ವ್ರಾಸಾ - 01**

| | |
|---|---|
| ಹೆಸರು | **ಶಿವಣ್ಣ** |
| ತಂದೆಯ ಹೆಸರು | **ರುದ್ರಪ್ಪ** |
| ವಯಸ್ಸು | **89** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಬಸವನವಾಳ್ಯ** |

**ದಿನಾಂಕಃ21-08-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ಮತ್ತು 3 ರವರು ನನ್ನ ಮಕ್ಕಳು. ಚಾಸಾ-4ರವರು ನನ್ನ ಸೊಸೆ. ಆರೋಪಿಗಳು ನಮ್ಮ ಗ್ರಾಮದವರು. 2022 ನೇ ಇಸವಿಯ ನವಂಬರ್ ತಿಂಗಳಿನಲ್ಲಿ ನಾವು ವ್ಯವಸಾಯವನ್ನು ಮಾಡುತ್ತಿದ್ದ ಜಮೀನಿನಲ್ಲಿ ಆರೋಪಿಗಳು ದನವನ್ನು ಮೇಯಿಸುತ್ತಿದ್ದರು. ಆ ಸಮಯದಲ್ಲಿ ಸದರಿ ಜಮೀನು ಆರೋಪಿಗಳಿಗೆ ಸೇರಬೇಕು ಎಂದು ಹೇಳಿ ನಮಗೆ ಬೈದರು. ರಾಜಶೇಖರ್ ರವರು ದೊಣ್ಣೆ ಮತ್ತು ಕಲ್ಲುಗಳಿಂದ ನಮಗೆ ಹೊಡೆದರು. ಈಗ ಸಾಕ್ಷಿಗೆ 2 ದೊಣ್ಣೆ ಮತ್ತು 4 ಕಲ್ಲುಗಳನ್ನು ತೋರಿಸಿದ್ದು, ಅದರಿಂದ ನಮ್ಮ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ಸದರಿ ವಸ್ತುಗಳನ್ನು ಮುದ್ದೆ ಮಾಲು-1ರಿಂದ 6 ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿರುವುದಿಲ್ಲ. ಆರೋಪಿಗಳನ್ನು ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.11-11-2022 ರಂದು ಬಸವನಪಾಳ್ಯ ಗ್ರಾಮದಲ್ಲಿ ನಿಮಗೆ ಸೇರಿದ ಸರ್ವೆ ನಂ.138/9ರ ಜಮೀನಿನಲ್ಲಿ ನೀವು, ಚಾಸಾ-3 ರಿಂದ 5ರವರು ದನಗಳನ್ನು ಮೇಯಿಸುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ನಿಮ್ಮ ದೂರದ ಸಂಬಂಧಿಕರಾದ ಆರೋಪಿಗಳು ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾಗಡಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಮತ್ತು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಅದು ವಿಚಾರಣೆಯ ಹಂತದಲ್ಲಿ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಸ್ವಾಧೀನದಲ್ಲಿ ಇರುವ ಸರ್ವೆ ನಂ. 138/9ರಲ್ಲಿ ಇರುವ ಸುಮಾರು 5.20 ಗುಂಟೆ ಜಮೀನನ್ನು ನಿಮಿಂದ ವಶಪಡಿಸಿಕೊಳ್ಳುವ ಏಕಾಏಕಿ ಬಂದು ಮೇಯುತ್ತಿದ್ದ ದನಗಳನ್ನು ಬಿಚ್ಚಿ ಓಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದನ್ನು ಕೇಳಲು ಹೋದಾಗ ಆರೋಪಿಗಳು ನಿಮಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೈಗಳಿಂದ ಗುದ್ದಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ 1ನೇ ಆರೋಪಿಯು ದೊಣ್ಣೆಯಿಂದ ನಿಮ್ಮ ತಲೆಗೆ ಮತ್ತು ಬೆನ್ನಿಗೆ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 3ನೇ ಆರೋಪಿಯು ಕಲ್ಲಿನಿಂದ ನಿಮ್ಮ ಬೆನ್ನಿಗೆ, ಎಡಗೈಗೆ ಹೊಡೆದು ಗಾಯ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-3 ರಿಂದ 5ರವರಿಗೂ ಸಹ ಆರೋಪಿಗಳು ದೊಣ್ಣೆ ಮತ್ತು ಕಲ್ಲುಗಳಿಂದ ಹೊಡೆದ ಪರಿಣಾಮ ಅವರ ತಲೆ, ಕೈ ಮತ್ತು ಕಾಲುಗಳಿಂದ ರಕ್ತ ಬಂದಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-4ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ಕಿವಿ ಹಾಗೂ ಹಣೆಗೆ ಹೊಡೆದು ರಕ್ತ ಗಾಯ ಪಡಿಸಿ ಅವಮಾನ ಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ನಿಮಗೆ ಪ್ರಾಣ ಬೆದರಿಕೆಯನ್ನು ಸಹ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ತಾವರೆಕೆರೆಯ ಅಮ್ಮಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೀರಾ ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-1ರವರು ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.13-11-2022 ರಂದು ನೀವು ನಿಮ್ಮ ಹೇಳಿಕೆಯನ್ನು ಪೋಲೀಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ವಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಆರ್. ಎಸ್, ವಕೀಲರಿಂದಃ-**

**01.** ನಿಮ್ಮ ಮತ್ತು ಆರೋಪಿಗಳ ನಡುವೆ ಸರ್ವೆ ನಂ.138/9ರ ಜಮೀನಿಗೆ ಸಂಬಂಧಿಸಿದಂತೆ ಕಳೆದ 25 ವರ್ಷಗಳಿಂದ ಸಿವಿಲ್ ವ್ಯಾಜ್ಯವು ನಡೆಯುತ್ತಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕಳೆದ 20 ರಿಂದ 25 ವರ್ಷಗಳಿಂದ ನಿಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2022 ನೇ ಇಸವಿಯ ನವಂಬರ್ ತಿಂಗಳಿನಲ್ಲಿ ಕೃತ್ಯವು ನಡೆದಿರುತ್ತದೆ, ಆದರೆ ಯಾವ ದಿನಾಂಕದಂದು ಸದರಿ ಕೃತವು ನಡೆದಿತ್ತು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ಚಾಸಾ-1ರವರು ಶಾಲೆಗೆ ಹೋಗಿದ್ದರು. ನಾನು ಧರಿಸಿದ್ದ ಅಂಗಿ, ಬನಿಯನ್ ಮತ್ತು ಪಂಚೆಗೆ ರಕ್ತಗಾಯವಾಗಿತ್ತು ಮತ್ತು ಸದರಿ ಬಟ್ಟೆಯನ್ನು ನಾನು ಪೋಲೀಸರಿಗೆ ನೀಡಿರುತ್ತೇನೆ. ನೀವು ಈ ಹಿಂದೆಯೂ ಸಹ ಸಾಕಷ್ಟು ಪ್ರಕರಣದಲ್ಲಿ ಸಾಕ್ಷಿ ಹೇಳುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕೃತ್ಯ ನಡೆದ ಮಾರನೇ ದಿನ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನನ್ನ ಹೊಲದ ಹತ್ತಿರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನೀಡಿರುತ್ತೇನೆ.

02. ನಾನು ನನ್ನ ಹೇಳಿಕೆಯನ್ನು ನೀಡುವ ಸಮಯದಲ್ಲಿ ಮಾಗಡಿ ನ್ಯಾಯಾಲಯದಲ್ಲಿ ಸಿವಿಲ್ ದಾವೆಯು ಇತ್ತು ಮತ್ತು ಸದರಿ ದಾವೆಯು ವಜಾ ಆಗಿದೆ ಮತ್ತು ಅದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಎಂದು ಹೇಳಿರುತ್ತೇನೆ. ಕೃತ್ಯ ನಡೆದ ಸಮಯದಲ್ಲಿ ನನಗೆ ಪ್ರಜ್ಞೆ ಇರಲಿಲ್ಲ. ಮಾರನೇ ದಿನ ಬೆಳಗ್ಗೆ ನನಗೆ ಪ್ರಜ್ಞೆ ಬಂದಿರುತ್ತದೆ. ನಿಮಗೆ ಪ್ರಜ್ಞೆ ಇಲ್ಲದೇ ಇದ್ದ ಕಾರಣ ನಿಮ್ಮನ್ನು ಯಾರು ಯಾವ ಆಸ್ಪತ್ರೆಗೆ ಸೇರಿದರು ಎಂದು ನಿಮಗೆ ಗೂತ್ತಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮಗೆ ಆರೋಪಿಗಳು ಹಲ್ಲೆ ಯನ್ನು ಮಾಡಿರುವುದಿಲ್ಲ ಮತ್ತು ಸಿವಿಲ್ ವ್ಯಾಜ್ಯ ಇರುವ ಕಾರಣದಿಂದ ನೀವು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮುದ್ದೆ ಮಾಲು-1 ಮತ್ತು 2 ನಿಮಗೆ ಸೇರಿರುತ್ತದೆ ಮತ್ತು ಮುದ್ದೆ ಮಾಲು-3 ರಿಂದ 6ನ್ನು ನೀವು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-4ರವರ ಬ್ಲೌಸ್ ಗೆ ರಕ್ತದ ಕಲೆಯಾಗಿತ್ತು ಮತ್ತು ಅದನ್ನು ಪೋಲೀಸರಿಗೆ ನೀಡಿರುತ್ತೇವೆ. ಚಾಸಾ-3ರವರ ಬಟ್ಟೆ ರಕ್ತದ

ಕಲೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಕೃತ್ಯ ನಡೆದ ಮಾರನೇ ದಿನ ಬೆಳಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಪೋಲೀಸರು ಸ್ಥಳಕ್ಕೆ ಬಂದು ಮುದ್ದೆ ಮಾಲು-1 ಮತ್ತು 2ನ್ನು ತೆಗೆದುಕೊಂಡು ಹೋದರು ಮತ್ತು ಆ ಸಮಯದಲ್ಲಿ ನಾನು ಅಲ್ಲಿಯೇ ಇದ್ದೇನು. ಅಮ್ಮಾ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ 2 ದಿನ ಇದ್ದೇನು. ನನಗೆ ಯಾವುದೇ ಹೊಲಗೆಯನ್ನು ಹಾಕಿರುವುದಿಲ್ಲ. ಚಾಸಾ-4ರವರ ಕಿವಿ ಹರಿದು ಹೋಗಿರುತ್ತದೆ ಮತ್ತು ಅವರಿಗೆ ಯಾವುದೇ ಹೋಲಗೆಯನ್ನು ಹಾಕಿರುವುದಿಲ್ಲ. ನೀವು ಆರೋಪಿಗೆ ಸೇರಿದ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ಚಾಸಾ-4ರವರ ಜುಟ್ಟನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿರುವುದಿಲ್ಲ ಮತ್ತು ನಿಮ್ಮೆಲ್ಲರಿಗೂ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | **ವ್ಯವಸಾಯ** |
| ವಿಳಾಸ | |

**ದಿನಾಂಕಃ 07-03-2024ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ವಾಟೀ ಸವಾಲು - ಆರೋಪಿ** ಪರ **ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**ಸಾಕ್ಷಿಗೆ ಕನ್ನಡ ಬಾಷೆಯು ಬಾರದೇ ಇರುವ ಕಾರಣ ವಕೀಲರಾದ ಶ್ರೀಮತಿ. ಶೃತಿರವರನ್ನು ಅನುವಾದಕರಾಗಿ ನೇಮಕ ಮಾಡಲು ಮಾನ್ಯ ಎಪಿಪಿ ಮತ್ತು ಆರೋಪಿಯ ಪರ ವಕೀಲರು ಸಮ್ಮತಿಸಿರುತ್ತಾರೆ.**